# ಕೆಲ್ಲಿ ಕೋಟೆಯ ಹಾದಿಯಲ್ಲಿ..

ಇತಿಹಾಸದ ಮರುಸೃಷ್ಟಿಯಲ್ಲಿ ಮಲೇಷ್ಯಾದ್ದೇ ವಿಭಿನ್ನ ಪ್ರಯತ್ನ. ಕೋಟೆ, ಅರಮನೆ, ಎಕೊರೆಸಾರ್ಟ್, ಪುರಾತತ್ವ ಪರಂಪರೆ– ಎಲ್ಲವನ್ನೂ ಅಚ್ಚುಕಟ್ಟಾಗಿ ಷೋಕೇಸ್ ಮಾಡಿರುವ ದೇಶವಿದು. ಇಲ್ಲಿಯ ಪ್ರವಾಸವೆಂದರೆ ಕಾಲದಲ್ಲಿ ಹಿಂದಕ್ಕೂ ಮುಂದಕ್ಕೂ ಜೀಕುವ ಅನನ್ಯ ಅನುಭವ.

ಚಿತ್ರ– ಲೇಖನ: **ಶೈಲಜಾ ಹೂಗಾರ**



ಕೆಲ್ಲೀಸ್ ಕ್ಯಾಸಲ್





**ಚ**ರಿತ್ರೆ ಅರಿಯುವ ಮತ್ತು ಕುತೂಹಲ ತಣಿಸುವ ಹಲವು ದಾರಿಗಳಿವೆ ಮಲೇಷ್ಯಾದಲ್ಲಿ. ರಾಜಧಾನಿ ಕ್ವಾಲಾಲಂಪುರದ ಆಡಳಿತ ರಾಜಧಾನಿ ಪುತ್ರಜಯ. ಇಲ್ಲಿನ ಸಮಯ ಸ್ತಂಭ ಮಲೇಷ್ಯಾದ ಚಾರಿತ್ರಿಕ ಘಟನೆಗಳನ್ನು ವಿಶಿಷ್ಟ ಕೆತ್ತನೆಯೊಂದಿಗೆ ಬಿಂಬಿಸುವ ಸ್ಮಾರಕ.

ಸರಣಿಯಾಗಿ ಒಂದೊಂದೇ ಘಟನೆ ಚಿತ್ರ ವಿವರಣೆಯೊಂದಿಗೆ ಗಾಜಿನ ಫಲಕದ ಮೇಲೆ ಬಿಚ್ಚಿಕೊಳ್ಳುತ್ತದೆ. ಸ್ವಾತಂತ್ರ್ಯ ಪೂರ್ವ(1957ಕ್ಕೂ ಮೊದಲು); ಸ್ವಾತಂತ್ರ್ಯಾ ನಂತರ (1957–70); ವರ್ತಮಾನ (1971–2020) ಹಾಗೂ ಭವಿಷ್ಯ (2020ರ ನಂತರ) ಎಂಬ ಪ್ರಮುಖ ಯುಗಗಳಲ್ಲಿ ಹರವಿಕೊಂಡಿದೆ. 2020ರ ದೃಷ್ಟಿಕೋನ ಎಂಬುದರೆಡೆಗೆ ಮಲೇಷ್ಯನ್ನರ ಸ್ಫೂರ್ತಿ ಮತ್ತು ನಿಷ್ಠೆಯನ್ನು ಇದು ಜಾಗೃತಗೊಳಿಸುವಂತಿದೆ.

ಸ್ಮಾರಕದ ಮೂಲ ವಿನ್ಯಾಸ ರಾಷ್ಟ್ರೀಯ ಪುಷ್ಪ ದಾಸವಾಳದಿಂದ ಪ್ರೇರಿತವಾಗಿದ್ದು ಹಿತ್ತಾಳೆ ಬಣ್ಣದಲ್ಲಿದೆ. ಮಲೇಷ್ಯಾದ 4ನೇ ಪ್ರಧಾನ ಮಂತ್ರಿ ತುನ್ ಡಾ. ಮಹತೀರ್ ಬಿನ್ ಮೊಹಮ್ಮದ್ 2003ರಲ್ಲಿ ಇದನ್ನು